Rehabilitation of Villages.

*Q.—186. Sri V. S. LAKSHMIKANTHAPPA (Sagar).—

Will the Government be pleased to state :—

(*a*) the number of villages affected under 1961 floods of the river Varada in Sorab Taluk and Sagar Taluk separately ;

(*b*) the action taken by the Government to rehabilitate such of the villages to the safety area away from floods ?

A.—Sri ALUR HANUMANTHAPPA (Deputy Minister for Minor Irrigation).—

(*a*) Sorab Taluk : Eleven Villages.
Sagar Taluk : Seven Villages.

(*b*)	*Sorab Taluk*	*Sagar Taluk.*
1.	An extent of 35 A-20 Guntas is proposed for acquisition for rehabilitation.	1. An estimate for the lay-out of Nellikoppa new extension near Doddikoppa village, Anavatti Hobli for Rs. 76,150 is under correspondence.
2.	Cash grant, building materials and zinc sheets amounting to Rs. 21,627 given.	2. ...
3.	Rs. 2,37,950 granted to the flood victims as interest-free loans.	3. Rs. 1,20,100 has been distributed to the flood affected persons as interest-free loans.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಉತ್ತರದಲ್ಲಿ ತಾವು ಸೊರಬ ತಾಲ್ಲೂಕಿನ 11 ಹಳ್ಳಿಗಳು ಹಾಗೂ ಸಾಗರ ತಾಲ್ಲೂಕಿನ ಏಳು ಹಳ್ಳಿಗಳು ಎಂದು ಹೇಳಿದ್ದೀರಿ. ಈ ಏಳು ಹಳ್ಳಿಗಳೂ ಸೊರಬ ತಾಲ್ಲೂಕಿಗೇ ಸೇರಿದ್ದು. ಸಾಗರ ತಾಲ್ಲೂಕಿಗೆ ಸೇರಿದ ನೆಲ್ಲಿಕೊಪ್ಪ ಹಾಗೂ ಇನ್ನಿತರ ಹಳ್ಳಿಗಳೂ ಸೊರಬ ತಾಲ್ಲೂಕಿಗೇ ಸೇರಿವೆ. ಆದುದರಿಂದ ಸಾಗರ ತಾಲ್ಲೂಕಿಗೆ ಸೇರಿದ ಏಳು ಹಳ್ಳಿಗಳು ಎಂದರೆ ಅವುಗಳು ಯಾವ ಯಾವುವು ಹೆಸರನ್ನು ಹೇಳಲು ಸಾಧ್ಯವೇ ?

†ಶ್ರೀ ಆಲೂರು ಹನುಮಂತಪ್ಪ.—ಸಾಗರ ತಾಲ್ಲೂಕಿನಲ್ಲಿ ಕನರೆ, ಮುಂದಕನರೆ, ಸೊಲ್ಲೇಗೂರು, ತಡಗಾನೆ, ಸೊಂಟಿಕೊಪ್ಪ, ಬೆಲಾಪೂರು ಮತ್ತು ಸೈಗೂರು ಇವಿಷ್ಟು ಗ್ರಾಮಗಳು ಸೇರಿವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಪುನರ್ವಸತಿ ಕಾರ್ಯಕ್ರಮ ಇಲ್ಲಿ ಯಾವ ಮಟ್ಟದಲ್ಲಿ ನಡೆಯುತ್ತಿದೆ ಮತ್ತು ತಾವು ಹೇಳಿದ 17 ಹಳ್ಳಿಗಳ ಜನರ ಪುನರ್ವಸತಿಗೆ ಯಾವ ರೀತಿ ವ್ಯವಸ್ಥೆ ಮಾಡುತ್ತಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಪುನರ್ವಸತಿಗಾಗಿ ಗ್ರಾಂಟು ಕೊಟ್ಟಿರತಕ್ಕದ್ದು ಸೊರಬ ತಾಲ್ಲೂಕಿಗೆ 21,627 ರೂಪಾಯಿಗಳು ಮತ್ತು ಇಂಟರೆಸ್ಟ್ ಫ್ರೀ ಲೋನು ಎಂದು 2,37,950 ರೂಪಾಯಿಗಳನ್ನು ಕೊಡಲಾಗಿದೆ. ಹಾಗೇ ಸಾಗರ ತಾಲ್ಲೂಕಿಗೆ 76,150 ರೂಪಾಯಿಗಳನ್ನು

†Indicates that the speeches or remarks have not been revised by the member concerned.

ಕೊಡಲಾಗಿದೆ ಮತ್ತು ಇದರ ಅಂದಾಜೂ ಕೂಡ ತಯಾರಾಗಿದೆ ಮತ್ತು ಇದು ಆಗುವುದರಲ್ಲಿದೆ. ಸುಮಾರು 1,20,100 ರೂಪಾಯಿಗಳಷ್ಟು ಇಂಟರೆಸ್ಟು ಫ್ರೀ ಲೋನು ಎಂದು ಇಲ್ಲಿಗೆ ಕೊಡ ಲಾಗಿದೆ. ಜನಕ್ಕೆ ಇಷ್ಟು ರಿಲೀಫ್ ವರ್ಕುಗಳನ್ನು ಇಲ್ಲಿ ಮಾಡಿಕೊಡಲಾಗಿದೆ. ಇನ್ನು ಪುನರ್ವಸತಿ ಮಾಡಲು ಎಲ್ಲೆಲ್ಲಿ ಜಾಗ ಅಕ್ಯೈರು ಮಾಡಲು ಸಾಧ್ಯವೋ ಅಲ್ಲೆಲ್ಲಾ ಅಕ್ಯೈರು ಮಾಡಲು ಪ್ರಯತ್ನ ನಡೆದಿದೆ ಮತ್ತು ಮನೆ ಕಟ್ಟಿಕೊಳ್ಳಲು ಜನಕ್ಕೆ ಕೆಲವು ಕಡೆಗಳಲ್ಲಿ ಜಿಂಕ್‌ಷೀಟುಗಳನ್ನು ಕೊಟ್ಟು ಅನುಕೂಲ ಮಾಡಿಕೊಡಲಾಗಿದೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಉತ್ತರದಲ್ಲಿ ನೆಲ್ಲಿಕೊಪ್ಪ ಹೊಸ ಬಡಾವಣೆಯ ನೆಲಗಟ್ಟಿನ ಬಗ್ಗೆ 76,150 ರೂಪಾಯಿಗಳ ಅಂದಾಜಿನ ಸಂಬಂಧದಲ್ಲಿ ಪತ್ರ ವ್ಯವಹಾರ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದರ ವ್ಯವಹಾರ ಆರಂಭವಾದುದು 1961ನೇ ಇಸವಿಯಲ್ಲಿ. 1961ನೇ ಇಸವಿ ಯಿಂದಲೂ ಇದರ ಅಕ್ಯೆಸಿಷನ್ ವ್ಯವಹಾರ ಇನ್ನೂ ಮುಗಿದಿಲ್ಲ ಎಂದು ಕಾಣುತ್ತದೆ. ಇನ್ನೆಷ್ಟು ವರ್ಷಗಳ ಕಾಲಾವಕಾಶ ಇದಕ್ಕೆ ಬೇಕು ಮತ್ತು ಯಾವಾಗ ಇದನ್ನು ಮುಗಿಸ ಬೇಕೆಂದು ಇದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಅಗಿಂದಾಗ್ಗೆ ಇಲ್ಲಿ ಪ್ರವಾಹದ ಹಾವಳಿ ಬರುತ್ತಿರುವುದನ್ನು ತಪ್ಪಿಸಲು ಫ್ಲಡ್ ಬ್ಯಾಂಕುಗಳನ್ನು ಕಟ್ಟಿ ತಕ್ಕ ಪರಿಹಾರ ಕ್ರಮಗಳನ್ನು ಮಾಡಲು ಸುಮಾರು 30-40 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿ ಫ್ಲಡ್ ಎಂಬ್ಯಾಂಕುಮೆಂಟು ಕಟ್ಟಬೇಕೆಂದು ಇಲ್ಲಿನ ಜನತೆಗೆ ತೊಂದರೆ ತಪ್ಪಿಸಬೇಕೆಂದು ಕೆಲವು ಸ್ಕೀಂಗಳನ್ನು ಮಾಡಲಾಗಿದೆ ಮತ್ತು ಈ ಸಂಬಂಧದಲ್ಲಿ 6,350 ರೂಪಾಯಿಗಳ ಒಂದು ಯೋಜನೆಯು ಅಂದಾಜನ್ನು ಈಗಾಗಲೇ ಸಿದ್ಧಪಡಿಸ ಲಾಗಿದೆ ಮತ್ತು ಇದನ್ನು ನಾಲ್ಕನೆ ಯೋಜನೆಯಲ್ಲಿ ಕಾರ್ಯಗತ ಮಾಡಬೇಕೆಂದು ಪ್ರಯತ್ನ ಮಾಡು ತ್ತಿದ್ದೇವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಬೇಗನೆ ಪುನರ್ವ್ಯವಸ್ಥೆ ಮಾಡುತ್ತೀರಿ ಎಂಬ ನಂಬಿಕೆಯ ಮೇಲೆ ನೆಲ್ಲಿಕೊಪ್ಪ ಮತ್ತು ದೊಡ್ಡಿಕೊಪ್ಪದ ಗ್ರಾಮಸ್ಥರು ಫ್ಲಡ್ ವಿಕ್ಟಿಮ್ಸ್‌ಗಾಗಿ ಕೊಟ್ಟಿರತಕ್ಕ ಇಂಟರೆಸ್ಟ್ ಫ್ರೀ ಲೋನನ್ನು ತೆಗೆದುಕೊಂಡಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅವರು ಏಕೆ ತೆಗೆದುಕೊಂಡಿಲ್ಲ ಎಂಬುದನ್ನು ಹೇಳಲಕ್ಕೆ ಸಾಧ್ಯವಿಲ್ಲ. ತೆಗೆದುಕೊಳ್ಳದಿದ್ದರೆ ಇವತ್ತೂ ಸಹ ತೆಗೆದುಕೊಳ್ಳುವುದಕ್ಕೆ ಮುಂದೆ ಬಂದರೆ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದು ಎರಡೂವರೆ ಮೂರು ಕೋಟಿ ರೂಪಾಯಿ ಸ್ಕೀಂ ಎಂದು ಹೇಳುತ್ತೀರಿ, ಒಂದೆರಡು ಸ್ಕೀಂಗಳನ್ನಾದರೂ ನಿಮ್ಮ ಕಾಲದಲ್ಲಿ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ವರದಾ ನದಿ ಮೇಲೆ 14 ಕೋಟಿ 65 ಲಕ್ಷ ರೂಪಾಯಿಗಳ ಪ್ರೊಜೆಕ್ಟೀವ್ ಕಮ್-ಇರಿಗೇಷನ್ ಪ್ರಾಜೆಕ್ಟ್ ಸ್ಕೀಂ ಇದೆ, ಈ ಸ್ಕೀಂಗಳನ್ನು ಮಾಡಿದ ಮೇಲೆ ಸಾವಿರಾರು ಎಕರೆ ಜಮೀನು ಸಾಗುವಳಿಗೆ ಬರುತ್ತದೆ. ಇಡೀ ಸಂಸ್ಥಾನದಲ್ಲಿ 95 ಸಾವಿರ ಎಕರೆ ನೀರಾವರಿಗೆ ಬರತಕ್ಕ ಫ್ಲಡ್ ಕಂಟ್ರೋಲ್ ಕಮ್ ಇರಿಗೇಷನ್ ಪ್ರಾಜೆಕ್ಟನ್ನು ಸಿದ್ಧಪಡಿಸಿದ್ದೆವು. 3ನೇ ಯೋಜನೆಯಲ್ಲಿ ಏನೂ ಮಾಡಲಿಲ್ಲ ಕಾರಣ ಹಣ ಇರಲಿಲ್ಲ. 4ನೇ ಯೋಜನೆಯಲ್ಲಿ 14 ಲಕ್ಷ 65 ಸಾವಿರ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರದವರಿಗೆ ಕೊಟ್ಟಿದ್ದೇವೆ. ಹಣ ಕೇಳುತ್ತಾ ಇದ್ದೇವೆ, ಅವರು ಕೊಡುತ್ತಾರೆ, ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಅಕ್ಟಿಜಿಷನ್ ಪ್ರೊಸೀಡಿಂಗ್ಸ್ ಆದಷ್ಟು ಬೇಗ ಮಾಡುತ್ತೇವೆ ಎಂದು ಹೇಳಿದಿರಿ. ಆದರೂ ಎಮರ್ಜೆನ್ಸಿ ಸೆಕ್ಷನ್ ಉಪಯೋಗಿಸಿ ಕೂಡಲೆ ಆ ಜಮೀನು ಸುಪರ್ದಿಗೆ ಕೊಟ್ಟು ಪುನರ್‌ವ್ಯವಸ್ಥೆಯ ಕಾರ್ಯವನ್ನು ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾ ರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಒಂದೊಂದು ಗ್ರಾಮದ ವಿಷಯದಲ್ಲಿ ಒಂದೊಂದು ರೀತಿಯ ಅಭಿಪ್ರಾಯ ಬರಬಹುದು ಅದನ್ನು ಕೂಲಂಕಷವಾಗಿ ಆದಷ್ಟು ಬೇಗನೆ ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.